ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಚಾಮರಾಜನಗರ (ಪೀಠಾಸೀನ ಕೊಳ್ಳೇಗಾಲ)

**ಎಸ್.ಸಿ. ಸಂಖ್ಯೆ 5021/2025**

ಪಿರ್ಯಾದುದಾರರು ಃ ಸರ್ಕಾರದ ಪರವಾಗಿ ಕೊಳ್ಳೇಗಾಲ ಪಟ್ಟಣ ಪೋಲಿಸ್ ಠಾಣೆ

ವಿರುದ್ಧ

ಆರೋಪಿ ಃ ಸೈಯದ್ ಫರ್ಮಾನ್ ಉರ್ಫ ಫರ್ಮಾನ್

**ದೋಷಾರೋಪಣೆ**

ಟಿ.ಸಿ. ಶ್ರೀಕಾಂತ್, ಬಿ.ಕಾಂ. ಎಲ್ಎಲ್ಬಿ., ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ, ಚಾಮರಾಜನಗರ (ಪೀಠಾಸೀನ ಕೊಳ್ಳೇಗಾಲ) ಆದ ನಾನು,

ಆರೋಪಿ – ಸೈಯದ್ ಫರ್ಮಾನ್ ಉರ್ಫ ಫರ್ಮಾನ್

ನಿಮ್ಮ ಮೇಲೆ ಮಾಡುವ ದೋಷಾರೋಪಣವೇನೆಂದರೆ –

ಮೊದಲನೆಯದಾಗಿ, ದಿನಾಂಕ 01–01–2025 ರಂದು ರಾತ್ರಿ 09.30 ಗಂಟೆ ಸಮಯದಲ್ಲಿ ಆರೋಪಿತನಾದ ನೀನು ಮನೆಯಲ್ಲಿ ಊಟವನ್ನು ಮಾಡುತ್ತಾ ಸಾಕ್ಷಿ–01 ರವರ ಮಗಳಾದ ಐರ್ವನ್‌ರೀದಾಳನ್ನು ಉದ್ದೇಶಿಸಿ ನಾನು ಊಟವನ್ನು ಮಾಡುವವರೆವಿಗೂ ಇಲ್ಲೆ ಇರು ಮಲಗಿಕೊಳ್ಳಬೇಡ ಎಂದು ಹೇಳಿದಾಗ ಸಾಕ್ಷಿ–03 ರವರು ನಿನನ್ನು ಉದ್ದೇಶಿಸಿ ಮಗುವಿಗೆ ಹುಷಾರಿಲ್ಲ ಅವಳಿಗೆ ಟಾನಿಕ್ ಹಾಕಿ ಮಲಗಿಸಬೇಕು ಎಂದಾಗ ಮನೆಯ ಬೆಡ್ ರೂಂನಲ್ಲಿ ಇದ್ದ ಐಮಾನ್ ಭಾನು ಸಾಕ್ಷಿ–03 ರವರನ್ನು ಉದ್ದೇಶಿಸಿ ಅವನನ್ನೇಕೆ ಕೇಳುತ್ತೀರಾ ಮಗುವಿಗೆ ಟಾನಿಕ್ ಹಾಕಿ ಮಲಗಿಸಿ ಅವನ ಮಾತೇ ನಡೀಬೇಕಾ ಎಂದಾಗ, ಸಾಕ್ಷಿ–03 ರವರು ತನ್ನ ಮಗುವನ್ನು ಎತ್ತಿಕೊಂಡು ಟಾನಿಕ್ ಹಾಕಿ ಮಲಗಿಸಲು ಹೋದಾಗ ಆರೋಪಿತನಾದ ನೀನು ಕೋಪಗೊಂಡು ಏಕಾಏಕಿ ನೀನು ಊಟವನ್ನು ಮಾಡುತ್ತಿದ್ದ ತಟ್ಟೆಯನ್ನು ಸೋಫಾದಿಂದ ಕೆಳಕ್ಕೆ ಎಸೆದು ಮನೆಯಲ್ಲಿ ಇದ್ದ ಒಂದು ಕಬ್ಬಿಣದ ಸಣ್ಣ ಪೈಪ್‌ನ್ನು ತೆಗೆದುಕೊಂಡು ಐಮಾನ್‌ಭಾನು(ಮೃತೆ) ಇದ್ದ ಬೆಡ್ ರೂಂ ಕೋಣೆಗೆ ಹೋಗಿ ಐಮಾನ್‌ಭಾನುವನ್ನು ಉದ್ದೇಶಿಸಿ ನೀನು ಸಾಕ್ಷಿ–03 ರವರಿಗೆ ಏಕೆ ಹೇಳಿಕೊಡುತ್ತೀಯಾ ಎಂದು ಕಬ್ಬಿಣದ ಪೈಪ್‌ನಿಂದ ಆಕೆಯ ಮೈಗೆ ಹೊಡೆದಿದ್ದು, ಆಗ ಐಮಾನ್‌ಭಾನುವು ಆರೋಪಿಯಾದ ನಿನ್ನನ್ನು ಉದ್ದೇಶಿಸಿ ಹೋಗೋ ಜಾಂಡ್–ಕೆ–ಬಾಲ್ (ಶ್ಯಾಟದ ನನ್ನ ಮಗನೇ) ಎಂದು ಉರ್ದು ಭಾಷೆಯಲ್ಲಿ ಬೈಯ್ದಾಗ ಆರೋಪಿತನಾದ ನೀನು ನನ್ನನ್ನೇ ಬೈಯ್ಯುತ್ತೀಯಾ ನಿನಗೆ ಸರಿಯಾಗಿ ಮಾಡುತ್ತೇನೆ ಎಂದು ಮನೆಯ ಅಡುಗೆ ಕೋಣೆಗೆ ಹೋಗಿ ಒಂದು ಚಾಕುವನ್ನು ತೆಗೆದುಕೊಂಡು ಐಮಾನ್‌ಭಾನು ಇದ್ದ ಬೆಡ್ ರೂಂ ಕೋಣೆಗೆ ಹೋಗುವಾಗ ಅಡ್ಡ ಬಂದ ಸಾಕ್ಷಿ–02 ರವರನ್ನು ಕೆಳಕ್ಕೆ ತಳ್ಳಿ ಕೋಣೆಯೊಳಕ್ಕೆ ಹೋಗಿ ಏಕಾಏಕಿ ಕೊಲೆ ಮಾಡುವ ಉದ್ದೇಶದಿಂದ ಐಮಾನ್‌ಭಾನುರವರ ಎಡ ಭಾಗದ ಕುತ್ತಿಗೆಗೆ ಚಾಕುವಿನಿಂದ

ಬಲವಾಗಿ ಚುಚ್ಚಿ ರಕ್ತಗಾಯಗೊಳಿಸಿದ್ದು, ಐಮಾನ್‌ಭಾನು ಅಲ್ಲೆ ಬೆಡ್‌ಮೇಲೆ ಕುಸಿದುಬಿದ್ದುಕೊಂಡಿದ್ದು, ನಂತರ ಆರೋಪಿತನಾದ ನೀನು ಮನೆಯ ಹಾಲ್‌ನ ಬಾಗಿಲಿನ ಚಿಲಕವನ್ನು ಹಾಕುತ್ತಿದ್ದಾಗ ಸಾಕ್ಷಿ–03 ರವರು ಬಾಗಿಲಿನ ಚಿಲಕವನ್ನು ತೆಗೆಯಲು ಪ್ರಯತ್ನಪಟ್ಟಾಗ ಸಾಕ್ಷಿ–03 ರವರನ್ನು ಉದ್ದೇಶಿಸಿ ಎಲ್ಲಾ ನಿಮ್ಮಿಂದಲೇ ಇದು ಆಗಿರುವುದು ಎಂದು ಸಾಕ್ಷಿ–03 ರವರನ್ನು ಸಹ ಕೊಲೆ ಮಾಡುವ ಉದ್ದೇಶದಿಂದ ಅದೇ ಚಾಕುವಿನಿಂದ ಆಕೆಯ ಬಲದ ಕೈಗೆ ಚುಚ್ಚಿದ್ದು, ಸಾಕ್ಷಿ–03 ರವರು ಅಲ್ಲಿಂದ ಅಡುಗೆ ಕೋಣೆಗೆ ಹೋದಾಗ ಅಲ್ಲಿಗೂ ಸಹ ಹೋಗಿ ಸಾಕ್ಷಿ–03 ರವರ ಕುತ್ತಿಗೆ ಹಿಂಭಾಗ ಅದೇ ಚಾಕುವಿನಿಂದ ಚುಚ್ಚಿ ಚುಚ್ಚಿ ರಕ್ತಗಾಯಗೊಳಿಸಿ ಚಾಕುವನ್ನು ಅಡುಗೆ ಕೋಣೆಯಲ್ಲಿ ಬಿಸಾಡಿ, ಸಾಕ್ಷಿ–03 ರವರನ್ನು ಕೆಳಕ್ಕೆ ಬೀಳಿಸಿ ನಿನ್ನ ಕಾಲಿನಿಂದ ಅವರ ಮೈಗೆ ಒದ್ದಿರುತ್ತೀಯ, ಆ ಸಮಯಕ್ಕೆ ಸಾಕ್ಷಿ–04 ರವರು ಬಂದು ಕೃತ್ಯವನ್ನು ನೋಡಿ ಆರೋಪಿತನನ್ನು ಉದ್ದೇಶಿಸಿ ಏಕೆ ಈ ರೀತಿಯಾಗಿ ಮಾಡಿದ್ದೀಯಾ ನಿನಗೆ ಬುದ್ಧಿ ಇಲ್ಲವೆ? ಎಂದು ಬೈಯ್ಯುತ್ತಿದ್ದಾಗ ಆರೋಪಿಯಾದ ನೀನು ನಿನ್ನನ್ನು ಸಹ ಬಿಡುವುದಿಲ್ಲ ನೋಡು ಎಂದು ನಿನ್ನ ಬಲದ ಕೈನಿಂದ ಸಾಕ್ಷಿ–04 ರವರ ಎಡದ ಕಪಾಲಕ್ಕೆ ಹೊಡೆದಿದ್ದು, ನಂತರ ನಿನ್ನ ಬಲದ ಕೈನಿಂದ ಸಾಕ್ಷಿ–04 ರವರು ಎಡದ ಕೈಯನ್ನು ಹಿಡಿದು ನುಲಿದು ಗಾಯಗೊಳಿಸಿದ್ದು, ಗಾಯಾಳುಗಳಾದ ಐಮಾನ್‌ಭಾನು, ಸಾಕ್ಷಿ–03, ಮತ್ತು ಸಾಕ್ಷಿ–04 ರವರನ್ನು ಚಿಕಿತ್ಸೆ ಸಂಬಂಧ ಕೊಳ್ಳೇಗಾಲ ಸರ್ಕಾರಿ ಆಸ್ಪತ್ರೆಗೆ ದಾಖಲು ಮಾಡಿದ್ದು, ವೈದ್ಯರು ಐಮಾನ್‌ಭಾನುರವರನ್ನು ಪರೀಕ್ಷಿಸಿ ರಾತ್ರಿ 10:00 ಗಂಟೆ ಸಮಯದಲ್ಲಿ ಮೃತಪಟ್ಟಿರುವುದಾಗಿ ದೃಢಪಡಿಸಿದ್ದು, ಆರೋಪಿತನಾದ ನೀನು ನಿನ್ನ ಅಣ್ಣನಾದ ಸಾಕ್ಷಿ–01 ರವರ ಮಗಳಾದ ಐರ್ವನ್‌ರೀದಾಳು ನೀನು ಮಲಗುವವರೆವಿಗೂ ನಿನ್ನ ಜೊತೆಯಲ್ಲಿ ಇರಲಿ ಮಲಗಿಕೊಳ್ಳುವುದು ಬೇಡ ನಿನ್ನ ಮಾತೇ ನಡೆಯಬೇಕು ಎಂಬ ವಿಚಾರಕ್ಕೆ ತೀಟೆ ಜಗಳವನ್ನು ತೆಗೆದು ಕೊಲೆ ಮಾಡುವ ಉದ್ದೇಶದಿಂದ ಐಮಾನ್‌ಭಾನುರವರ ಮೇಲೆ ಚಾಕುವಿನಿಂದ ಹಲ್ಲೆ ಮಾಡಿ ಕೊಲೆ ಮಾಡಿರುತ್ತೀಯ, ಆ ಮೂಲಕ ಆರೋಪಿಯಾದ ನೀನು ಭಾರತೀಯ ನ್ಯಾಯ ಸಂಹಿತೆ ಕಲಂ 103(1) ರ ರೀತಿಯಲ್ಲಿ ಶಿಕ್ಷಾರ್ಹ ಅಪರಾಧವೆಸಗಿರುತ್ತೀಯ ಮತ್ತು ಆ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯದಲ್ಲಿ ಮಾಡಿರುತ್ತೀಯ.

ಎರಡನೆಯದಾಗಿ, ಮೇಲೆ ತಿಳಿಸಿದ ದಿನಾಂಕ, ಸಮಯ, ಸ್ಥಳದಲ್ಲಿ ಹಾಗೂ ಮೇಲೆ ತಿಳಿಸಿದ ಕಾರಣಕ್ಕಾಗಿ ಕೊಲೆ ಮಾಡುವ ಉದ್ದೇಶದಿಂದ ಐಮಾನ್‌ಭಾನುರವರ ಎಡ ಭಾಗದ ಕುತ್ತಿಗೆಗೆ ಚಾಕುವಿನಿಂದ ಬಲವಾಗಿ ಚುಚ್ಚಿ ರಕ್ತಗಾಯಗೊಳಿಸಿದ್ದು, ಐಮಾನ್‌ಭಾನು ಅಲ್ಲೆ ಬೆಡ್‌ಮೇಲೆ ಕುಸಿದುಬಿದ್ದುಕೊಂಡಿದ್ದು, ನಂತರ ಆರೋಪಿತನಾದ ನೀನು ಮನೆಯ ಹಾಲ್‌ನ ಬಾಗಿಲಿನ ಚಿಲಕವನ್ನು ಹಾಕುತ್ತಿದ್ದಾಗ ಸಾಕ್ಷಿ–03 ರವರು ಬಾಗಿಲಿನ ಚಿಲಕವನ್ನು ತೆಗೆಯಲು ಪ್ರಯತ್ನಪಟ್ಟಾಗ ಸಾಕ್ಷಿ–03 ರವರನ್ನು ಉದ್ದೇಶಿಸಿ ಎಲ್ಲಾ ನಿಮ್ಮಿಂದಲೇ ಇದು ಆಗಿರುವುದು ಎಂದು ಸಾಕ್ಷಿ–03 ರವರನ್ನು ಸಹ ಕೊಲೆ ಮಾಡುವ ಉದ್ದೇಶದಿಂದ ಅದೇ ಚಾಕುವಿನಿಂದ ಆಕೆಯ ಬಲದ ಕೈಗೆ ಚುಚ್ಚಿದ್ದು, ಸಾಕ್ಷಿ–03 ರವರು ಅಲ್ಲಿಂದ ಅಡುಗೆ ಕೋಣೆಗೆ ಹೋದಾಗ ಅಲ್ಲಿಗೂ ಸಹ ಹೋಗಿ ಸಾಕ್ಷಿ–03 ರವರ ಕುತ್ತಿಗೆ ಹಿಂಭಾಗ ಅದೇ ಚಾಕುವಿನಿಂದ ಚುಚ್ಚಿ ಚುಚ್ಚಿ ರಕ್ತಗಾಯಗೊಳಿಸಿ ಸಾಕ್ಷಿ–03 ಇವರನ್ನು ಕೊಲೆ ಮಾಡಲು

ಪ್ರಯತ್ನಿಸಿರುತ್ತೀಯ ಹಾಗೂ ಚಾಕುವನ್ನು ಅಡುಗೆ ಕೋಣೆಯಲ್ಲಿ ಬಿಸಾಡಿ ಸಾಕ್ಷಿ-03 ರವರನ್ನು ಕೆಳಕ್ಕೆ ಬಿಳಿಸಿ ನಿನ್ನ ಕಾಲಿನಿಂದ ಅವರ ಮೈಗೆ ಒದ್ದಿರುತ್ತೀಯ, ಆ ಮೂಲಕ ಆರೋಪಿಯಾದ ನೀನು ಭಾರತೀಯ ನ್ಯಾಯ ಸಂಹಿತೆ ಕಲಂ 109(1) ರ ರೀತಿಯಲ್ಲಿ ಶಿಕ್ಷಾರ್ಹ ಅಪರಾಧವೆಸಗಿರುತ್ತೀಯ ಮತ್ತು ಆ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯದಲ್ಲಿ ಮಾಡಿರುತ್ತೀಯ.

ಮೂರನೆಯದಾಗಿ, ಮೇಲೆ ತಿಳಿಸಿದ ದಿನಾಂಕ, ಸಮಯ, ಸ್ಥಳದಲ್ಲಿ ಹಾಗೂ ಮೇಲೆ ತಿಳಿಸಿದ ಕಾರಣಕ್ಕಾಗಿ ಕೊಲೆ ಮಾಡುವ ಉದ್ದೇಶದಿಂದ ಐಮಾನ್‌ಭಾನುರವರ ಎಡ ಭಾಗದ ಕುತ್ತಿಗೆಗೆ ಚಾಕುವಿನಿಂದ ಬಲವಾಗಿ ಚುಚ್ಚಿ ರಕ್ತಗಾಯಗೊಳಿಸಿದ್ದು, ನಂತರ ಆರೋಪಿತನಾದ ನೀನು ಮನೆಯ ಹಾಲ್‌ನ ಬಾಗಿಲಿನ ಚಿಲಕವನ್ನು ಹಾಕುತ್ತಿದ್ದಾಗ ಸಾಕ್ಷಿ-03 ರವರು ಬಾಗಿಲಿನ ಚಿಲಕವನ್ನು ತೆಗೆಯಲು ಪ್ರಯತ್ನಪಟ್ಟಾಗ ಸಾಕ್ಷಿ-03 ರವರನ್ನು ಉದ್ದೇಶಿಸಿ ಎಲ್ಲಾ ನಿಮ್ಮಿಂದಲೇ ಇದು ಆಗಿರುವುದು ಎಂದು ಸಾಕ್ಷಿ-03 ರವರನ್ನು ಸಹ ಕೊಲೆ ಮಾಡುವ ಉದ್ದೇಶದಿಂದ ಅದೇ ಚಾಕುವಿನಿಂದ ಆಕೆಯ ಬಲದ ಕೈಗೆ ಚುಚ್ಚಿದ್ದು, ಸಾಕ್ಷಿ-03 ರವರು ಅಲ್ಲಿಂದ ಅಡುಗೆ ಕೋಣೆಗೆ ಹೋದಾಗ ಅಲ್ಲಿಗೂ ಸಹ ಹೋಗಿ ಸಾಕ್ಷಿ-03 ರವರ ಕುತ್ತಿಗೆ ಹಿಂಭಾಗ ಅದೇ ಚಾಕುವಿನಿಂದ ಚುಚ್ಚಿ ಚುಚ್ಚಿ ರಕ್ತಗಾಯಗೊಳಿಸಿ ಚಾಕುವನ್ನು ಅಡುಗೆ ಕೋಣೆಯಲ್ಲಿ ಬಿಸಾಡಿ, ಸಾಕ್ಷಿ-03 ರವರನ್ನು ಕೆಳಕ್ಕೆ ಬಿಳಿಸಿ ನಿನ್ನ ಕಾಲಿನಿಂದ ಅವರ ಮೈಗೆ ಒದ್ದಿರುತ್ತೀಯ, ಆ ಸಮಯಕ್ಕೆ ಸಾಕ್ಷಿ-04 ರವರು ಬಂದು ಕೃತ್ಯವನ್ನು ನೋಡಿ ಆರೋಪಿಯಾದ ನಿನನ್ನು ಉದ್ದೇಶಿಸಿ ಏಕೆ ಈ ರೀತಿಯಾಗಿ ಮಾಡಿದ್ದೀಯಾ ನಿನಗೆ ಬುದ್ದಿ ಇಲ್ಲವೆ? ಎಂದು ಬೈಯ್ಯುತ್ತಿದ್ದಾಗ ಆರೋಪಿಯಾದ ನೀನು ನಿನ್ನನ್ನು ಸಹ ಬಿಡುವುದಿಲ್ಲ ನೋಡು ಎಂದು ನಿನ್ನ ಬಲದ ಕೈನಿಂದ ಸಾಕ್ಷಿ-04 ರವರ ಎಡದ ಕಪಾಲಕ್ಕೆ ಹೊಡೆದಿದ್ದು, ನಂತರ ನಿನ್ನ ಬಲದ ಕೈನಿಂದ ಸಾಕ್ಷಿ-04 ರವರು ಎಡದ ಕೈಯನ್ನು ಹಿಡಿದು ನುಲಿದು ಸ್ವಇಚ್ಛೆಯಿಂದ ಗಾಯಗೊಳಿಸಿರುತ್ತೀಯ , ಆ ಮೂಲಕ ಆರೋಪಿಯಾದ ನೀನು ಭಾರತೀಯ ನ್ಯಾಯ ಸಂಹಿತೆ ಕಲಂ 115(1) ರ ರೀತಿಯಲ್ಲಿ ಶಿಕ್ಷಾರ್ಹ ಅಪರಾಧವೆಸಗಿರುತ್ತೀಯ ಮತ್ತು ಆ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯದಲ್ಲಿ ಮಾಡಿರುತ್ತೀಯ.

ಕೊನೆಯದಾಗಿ, ಮೇಲೆ ತಿಳಿಸಿದ ದಿನಾಂಕ, ಸಮಯ, ಸ್ಥಳದಲ್ಲಿ ಹಾಗೂ ಮೇಲೆ ತಿಳಿಸಿದ ಕಾರಣಕ್ಕಾಗಿ ಮನೆಯಲ್ಲಿ ಇದ್ದ ಒಂದು ಕಬ್ಬಿಣದ ಸಣ್ಣ ಪೈಪ್‌ನ್ನು ತೆಗೆದುಕೊಂಡು ಐಮಾನ್‌ಭಾನು (ಮೃತೆ) ಇದ್ದ ಬೆಡ್ ರೂಂ ಕೋಣೆಗೆ ಹೋಗಿ ಐಮಾನ್‌ಭಾನುವನ್ನು ಉದ್ದೇಶಿಸಿ ನೀನು ಸಾಕ್ಷಿ-03 ರವರಿಗೆ ಏಕೆ ಹೇಳಿಕೊಡುತ್ತೀಯಾ ಎಂದು ಅಪಾಯಕಾರಿ ಆಯುಧವಾದ ಕಬ್ಬಿಣದ ಪೈಪ್‌ನಿಂದ ಆಕೆಯ ಮೈಗೆ ಹೊಡೆದಿದ್ದು, ನಂತರ ಆರೋಪಿತನಾದ ನೀನು ಮನೆಯ ಹಾಲ್‌ನ ಬಾಗಿಲಿನ ಚಿಲಕವನ್ನು ಹಾಕುತ್ತಿದ್ದಾಗ ಸಾಕ್ಷಿ-03 ರವರು ಬಾಗಿಲಿನ ಚಿಲಕವನ್ನು ತೆಗೆಯಲು ಪ್ರಯತ್ನಪಟ್ಟಾಗ ಸಾಕ್ಷಿ-03 ರವರನ್ನು ಉದ್ದೇಶಿಸಿ ಎಲ್ಲಾ ನಿಮ್ಮಿಂದಲೇ ಇದು ಆಗಿರುವುದು ಎಂದು ಸಾಕ್ಷಿ-03 ರವರನ್ನು ಸಹ ಕೊಲೆ ಮಾಡುವ ಉದ್ದೇಶದಿಂದ ಅಪಾಯಕಾರಿ ಆಯುಧವಾದ ಅದೇ ಚಾಕುವಿನಿಂದ ಆಕೆಯ ಬಲದ ಕೈಗೆ ಚುಚ್ಚಿ ಸ್ವಇಚ್ಛೆಯಿಂದ ಗಾಯಗೊಳಿಸಿರುತ್ತೀಯ, ಆ ಮೂಲಕ ಆರೋಪಿಯಾದ ನೀನು

ಭಾರತೀಯ ನ್ಯಾಯ ಸಂಹಿತೆ ಕಲಂ 118(2) ರ ರೀತಿಯಲ್ಲಿ ಶಿಕ್ಷಾರ್ಹ ಅಪರಾಧವೆಸಗಿರುತ್ತೀಯ ಮತ್ತು ಆ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯದಲ್ಲಿ ಮಾಡಿರುತ್ತೀಯ.

ದಿನಾಂಕಃ 12-9-2025

(ಟಿ.ಸಿ. ಶ್ರೀಕಾಂತ್)
ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ, ಚಾಮರಾಜನಗರ
(ಪೀಠಾಸೀನ ಕೊಳ್ಳೇಗಾಲ)

ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಚಾಮರಾಜನಗರ (ಪೀಠಾಸೀನ ಕೊಳ್ಳೇಗಾಲ)

**ಎಸ್.ಸಿ. ಸಂಖ್ಯೆ 5021/2025**

ಪಿರ್ಯಾದುದಾರರು ಃ ಸರ್ಕಾರದ ಪರವಾಗಿ ಕೊಳ್ಳೇಗಾಲ ಪಟ್ಟಣ ಪೋಲಿಸ್ ಠಾಣೆ

ವಿರುದ್ಧ

ಆರೋಪಿ ಃ ಸೈಯದ್ ಫರ್ಮಾನ್ ಉರ್ಫ ಫರ್ಮಾನ್
ಬಿನ್ ಸೈಯದ್‌ಪಾಷ
31 ವರ್ಷ
ವಾಸಃ ಈದ್ಗಾ ಮೊಹಲ್ಲಾ, ಕೊಳ್ಳೇಗಾಲ ಟೌನ್,
ಕೊಳ್ಳೇಗಾಲ ತಾಲ್ಲೂಕು, ಚಾಮರಾಜನಗರ ಜಿಲ್ಲೆ.

**ದೋಷಾರೋಪಣೆಃ**

ಪ್ರಶ್ನೆಃ 1: ಮೇಲೆ ಓದಿ ಹೇಳಲಾದ ದೋಷಾರೋಪಣೆಯು ಅರ್ಥವಾಯಿತೆ?

ಉತ್ತರಃ

ಪ್ರಶ್ನೆಃ 2: ತಪ್ಪನ್ನು ಒಪ್ಪಿಕೊಳ್ಳುವೆಯಾ ಅಥವಾ ವಿಚಾರಣೆಯಾಗಬೇಕಾ?

ಉತ್ತರಃ

ದಿನಾಂಕಃ 12-9-2025

(ಟಿ.ಸಿ. ಶ್ರೀಕಾಂತ್)
ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ, ಚಾಮರಾಜನಗರ
(ಪೀಠಾಸೀನ ಕೊಳ್ಳೇಗಾಲ)